# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 567

ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11-12-2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳ ನೇಮಕಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಬೀದರ್ ಜಿಲ್ಲೆಯ ಸಾರಿಗೆ ಇಲಾಖೆಯಲ್ಲಿ ವಿವಿಧ ವೃಂದದ ಒಟ್ಟು 34 ಹುದ್ದೆಗಳು ಖಾಲಿ ಇರುತ್ತವೆ.<br><br>ಖಾಲಿ ಹುದ್ದೆಗಳ ಪೈಕಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ:06-07-2020 ರಲ್ಲಿ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ. ಅಲ್ಲದೆ, ಮುಂಬಡ್ತಿಗೆ ಮೀಸಲಿರುವ ಖಾಲಿ ಹುದ್ದೆಗಳನ್ನು ಹಂತಹಂತವಾಗಿ ಬಡ್ತಿ ನೀಡುವ ಮೂಲಕ ತುಂಬಲಾಗುತ್ತಿದೆ.<br><br>ಆದಾಗ್ಯೂ ತಾಂತ್ರಿಕ ಸಹಾಯಕರು, ಡಾಟಾ ಎಂಟ್ರಿ ಆಪರೇಟರ್ಸ್ ಮತ್ತು ವಾಹನ ಚಾಲಕರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಹೋಂಗಾರ್ಡ್‌ಗಳ ಸೇವೆಯನ್ನೂ ಸಹ ಪಡೆದು ಸಾರ್ವಜನಿಕರ ಕೆಲಸಗಳಲ್ಲಿ ಯಾವುದೇ ವಿಳಂಬವಿಲ್ಲದೇ ವಿಲೇವಾರಿ ಮಾಡಲಾಗುತ್ತಿದೆ.<br><br>ಮುಂದುವರೆದು, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ ಬೀದರ್ ಜಿಲ್ಲೆಯ ಒಟ್ಟು 353 ಹುದ್ದೆಗಳು ಖಾಲಿ ಇರುತ್ತವೆ.<br><br>ಸಂಸ್ಥೆಯ ಅಧಿಕಾರಿಗಳು ಹಾಗೂ ಮೇಲ್ವಿಚಾರಕ ಸಿಬ್ಬಂದಿಗಳ ನೇಮಕಾತಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಮಾಡಲಾಗುತ್ತಿದ್ದು, 2018ರಿಂದ ಇಲ್ಲಿಯವರೆಗೆ ಅಧಿಕಾರಿ / ಮೇಲ್ವಿಚಾರಕ ಹುದ್ದೆಗಳಿಗೆ ನೇರ ನೇಮಕಾತಿಯನ್ನು ಮಾಡಿಕೊಂಡಿರುವುದಿಲ್ಲ.<br><br>ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ: 06-07-2020ರ ಅನುಸಾರ ಮುಂದಿನ ಆದೇಶದವರೆಗೆ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ.<br><br>ಮುಂದುವರೆದು, ಈ.ಕ.ರ.ಸಾ.ಸಂಸ್ಥೆಯಲ್ಲಿ ಪ್ರಸ್ತುತ ಖಾಲಿ ಇರುವ ಮತ್ತು 2019-20ನೇ ಸಾಲಿಗೆ ಅವಶ್ಯವಿರುವ ಚಾಲಕ 925 (740 ಸ್ಥಳೀಯ & 185 ಮಿಕ್ಕುಳಿದ) ಮತ್ತು ಚಾಲಕ-ಕಂ-ನಿರ್ವಾಹಕ 694 (555 ಸ್ಥಳೀಯ & 139 ಮಿಕ್ಕುಳಿದ) ಒಟ್ಟು 1619 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಈಗಾಗಲೇ ಜಾಹೀರಾತನ್ನು ಹೊರಡಿಸಲಾಗಿರುತ್ತದೆ.<br><br>ಅದೇ ರೀತಿ, ಇನ್ನೂ ಒಟ್ಟು 920 ದರ್ಜೆ-3 ಮೇಲ್ವಿಚಾರಕೇತರ ವೃಂದದ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೆ ಕ್ರಮ ಪ್ರಗತಿಯಲ್ಲಿರುವ ಸಂದರ್ಭದಲ್ಲಿಯೇ ದೇಶವ್ಯಾಪಿ ಕೋವಿಡ್-19 ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡಿರುವ ಹಿನ್ನೆಲೆಯಲ್ಲಿ, ಆರ್ಥಿಕ ಮಿತವ್ಯಯ ಸಾಧಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ: 06-07-2020ರಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕಲಾಗ್ ಹುದ್ದೆಗಳೂ ಸೇರಿದಂತೆ ಹಾಗೂ ಆರ್ಥಿಕ ಇಲಾಖೆಯ ಅನುಮತಿ ಪಡೆದು ನೇಮಕಾತಿಯ ವಿವಿಧ ಹಂತಗಳಲ್ಲಿರುವ ಹುದ್ದೆಗಳ ನೇಮಕಾತಿಯನ್ನು ಸಹ ತಡೆಹಿಡಿಯಲು ಆದೇಶಿಸಲಾಗಿರುತ್ತದೆ. |

<table>
<tr><td></td><td></td><td>ಸರ್ಕಾರದಿಂದ ನೇಮಕಾತಿಗೆ ವಿಧಿಸಲಾದ ತಡೆ ಆದೇಶವನ್ನು ತೆರವುಗೊಳಿಸಿದ ತರುವಾಯ ನೇಮಕಾತಿ ಪ್ರಕ್ರಿಯೆಗೆ ಮರುಚಾಲನೆ ನೀಡಲಾಗುವುದು.</td></tr>
<tr><td>ಆ)</td><td>ಜಿಲ್ಲೆಯಲ್ಲಿ ಸಂಚರಿಸುವ ಬಸ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>
ಬೀದರ್ ಜಿಲ್ಲೆಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸೇರಿದಂತೆ ಒಟ್ಟಾರೆ 3665 ಬಸ್ಸುಗಳು ನೋಂದಣಿಯಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಬಸ್‌ಗಳ ಸಂಖ್ಯೆ</th></tr>
<tr><td>1</td><td>ಬೀದರ್</td><td>2202</td></tr>
<tr><td>2</td><td>ಔರದ್</td><td>344</td></tr>
<tr><td>3</td><td>ಕಮಲನಗರ</td><td>0</td></tr>
<tr><td>4</td><td>ಬಸವಕಲ್ಯಾಣ</td><td>330</td></tr>
<tr><td>5</td><td>ಭಾಲ್ಕಿ</td><td>779</td></tr>
<tr><td colspan="2">ಒಟ್ಟು</td><td>3655</td></tr>
</table>
ಬೀದರ್ ಜಿಲ್ಲೆ ಸಾರಿಗೆ ಕಾರ್ಯಾಚರಣೆಯು ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಅದರಂತೆ ಜಿಲ್ಲೆಯಲ್ಲಿರುವ ಸಂಸ್ಥೆಯ 6 ಬಸ್ ಘಟಕಗಳಿಂದ ಪ್ರತಿ ದಿನ 434 ಬಸ್‌ಗಳು ಕಾರ್ಯಚರಣೆಯಾಗುತ್ತಿದ್ದು, ಘಟಕವಾರು ವಿವರ ಈ ಕೆಳಗಿನಂತಿದೆ:
<table>
<tr><th>ಕ್ರಸಂ</th><th>ಘಟಕ</th><th>ಅನುಸೂಚಿ ಸಂಖ್ಯೆ</th></tr>
<tr><td>1</td><td>ಬೀದರ ಘಟಕ–1</td><td>82</td></tr>
<tr><td>2</td><td>ಬೀದರ ಘಟಕ–2</td><td>64</td></tr>
<tr><td>3</td><td>ಹುಮನಾಬಾದ</td><td>85</td></tr>
<tr><td>4</td><td>ಬಸವಕಲ್ಯಾಣ</td><td>73</td></tr>
<tr><td>5</td><td>ಭಾಲ್ಕಿ</td><td>71</td></tr>
<tr><td>6</td><td>ಔರಾದ</td><td>59</td></tr>
<tr><td colspan="2">ಒಟ್ಟು</td><td>434</td></tr>
</table>
ಕ.ರಾ.ರ.ಸಾ.ನಿಗಮದ ವತಿಯಿಂದ ಬೆಂಗಳೂರು–ಹೈದರಾಬಾದ್–ಬೀದರ್ ಮಾರ್ಗದಲ್ಲಿ 2 ಬಸ್‌ಗಳನ್ನು ಒಂದು ದುಂಡು ಸುತ್ತುವಳಿ ಕಾರ್ಯಾಚರಿಸಲಾಗುತ್ತಿದೆ.
ವಾ.ಕ.ರ.ಸಾ.ಸಂಸ್ಥೆಯಿಂದ ಬೀದರ್ ಜಿಲ್ಲೆ ಹಾಗೂ ಬೀದರ್ ಮುಖಾಂತರ 10 ಬಸ್ಸುಗಳು ಸಂಚರಿಸುತ್ತಿದ್ದು, ತಾಲೂಕಾವಾರು ವಿವರ ಈ ಕೆಳಗಿನಂತಿದೆ:
<table>
<tr><th>ತಾಲೂಕು</th><th>ಒಟ್ಟು ಬಸ್ಸುಗಳ ಕಾರ್ಯಾಚರಣೆ</th></tr>
<tr><td>ಬೀದರ್</td><td>4</td></tr>
<tr><td>ಹುಮನಾಬಾದ್</td><td>4</td></tr>
<tr><td>ಬಸವಕಲ್ಯಾಣ</td><td>2</td></tr>
<tr><td>ಒಟ್ಟು</td><td>10</td></tr>
</table>
</td></tr>
</table>

<table>
<tr>
<td>ಇ)</td>
<td>ಜಿಲ್ಲೆಯ ನೂರಾರು ಗ್ರಾಮದಲ್ಲಿ ಬಸ್ ಸಂಚರಿಸುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;</td>
<td>ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ 667 ಗ್ರಾಮಗಳ ಪೈಕಿ 661 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. ಉಳಿದ 6 ಗ್ರಾಮಗಳಿಗೆ ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೇವೆ ಒದಗಿಸಿರುವುದಿಲ್ಲ.</td>
</tr>
<tr>
<td>ಈ)</td>
<td>ಜಿಲ್ಲೆಯಲ್ಲಿರುವ ಬಸ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td>
<td>ಬೀದರ್ ಜಿಲ್ಲೆಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸೇರಿದಂತೆ ಒಟ್ಟಾರೆ 3665 ಬಸ್ಸುಗಳು ನೋಂದಣಿಯಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಬಸ್‌ಗಳ ಸಂಖ್ಯೆ</th></tr>
<tr><td>1</td><td>ಬೀದರ್</td><td>2202</td></tr>
<tr><td>2</td><td>ಔರದ್</td><td>344</td></tr>
<tr><td>3</td><td>ಕಮಲನಗರ</td><td>0</td></tr>
<tr><td>4</td><td>ಬಸವಕಲ್ಯಾಣ</td><td>330</td></tr>
<tr><td>5</td><td>ಭಾಲ್ಕಿ</td><td>779</td></tr>
<tr><td colspan="2">ಒಟ್ಟು</td><td>3655</td></tr>
</table>
ಬೀದರ್ ಜಿಲ್ಲೆ ಸಾರಿಗೆ ಕಾರ್ಯಾಚರಣೆಯು ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಅದರಂತೆ ಜಿಲ್ಲೆಯಲ್ಲಿರುವ ಸಂಸ್ಥೆಯ 6 ಬಸ್ ಘಟಕಗಳಿಂದ ಪ್ರತಿ ದಿನ 434 ಬಸ್‌ಗಳು ಕಾರ್ಯಾಚರಣೆಯಾಗುತ್ತಿದ್ದು, ಘಟಕವಾರು ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ.ಸಂ</th><th>ಘಟಕ</th><th>ಅನುಸೂಚಿ ಸಂಖ್ಯೆ</th></tr>
<tr><td>1</td><td>ಬೀದರ ಘಟಕ-1</td><td>82</td></tr>
<tr><td>2</td><td>ಬೀದರ ಘಟಕ-2</td><td>64</td></tr>
<tr><td>3</td><td>ಹುಮನಾಬಾದ</td><td>85</td></tr>
<tr><td>4</td><td>ಬಸವಕಲ್ಯಾಣ</td><td>73</td></tr>
<tr><td>5</td><td>ಭಾಲ್ಕಿ</td><td>71</td></tr>
<tr><td>6</td><td>ಔರಾದ</td><td>59</td></tr>
<tr><td colspan="2">ಒಟ್ಟು</td><td>434</td></tr>
</table>
</td>
</tr>
<tr>
<td>ಉ)</td>
<td>ಜಿಲ್ಲೆಯಲ್ಲಿರುವ ಮಿನಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ನಿರ್ಮಾಣಗೊಂಡಿರುವ ಬಸ್ ನಿಲ್ದಾಣಗಳು ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?</td>
<td>ಜಿಲ್ಲೆಯಲ್ಲಿ 11 ಮಿನಿ ಬಸ್ ನಿಲ್ದಾಣಗಳಿದ್ದು, ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಮಿನಿ ಬಸ್ ನಿಲ್ದಾಣಗಳು</th></tr>
<tr><td>1.</td><td>ಬೀದರ್</td><td>ಮನ್ನಾಯಕಹಳ್ಳಿ</td></tr>
<tr><td>2.</td><td>ಬೀದರ್</td><td>ಬಗದಲ್</td></tr>
<tr><td>3.</td><td>ಔರಾದ</td><td>ಮುಧೋಳ(ಬಿ)</td></tr>
<tr><td>4.</td><td>ಔರಾದ</td><td>ಕಮಲನಗರ</td></tr>
<tr><td>5.</td><td>ಔರಾದ</td><td>ಸಂತಪೂರ</td></tr>
<tr><td>6.</td><td>ಔರಾದ</td><td>ಠಾಣಾಕುಸನೂರ</td></tr>
<tr><td>7.</td><td>ಔರಾದ</td><td>ಚಿಂತಕಿ</td></tr>
<tr><td>8.</td><td>ಬಸವ ಕಲ್ಯಾಣ</td><td>ಹುಲಸೂರ</td></tr>
<tr><td>9.</td><td>ಬಸವ ಕಲ್ಯಾಣ</td><td>ಮುಡಬಿ</td></tr>
<tr><td>10.</td><td>ಹುಮನಾಬಾದ</td><td>ಹುಡಗಿ</td></tr>
<tr><td>11.</td><td>ಹುಮನಾಬಾದ</td><td>ಹಳ್ಳಿಖೇಡ (ಬಿ)</td></tr>
</table>
</td>
</tr>
</table>

...4

| | | |
|---|---|---|
| | | ಸದರಿ ಬಸ್ ನಿಲ್ದಾಣಗಳ ಪೈಕಿ ಬೀದರ್ ಜಿಲ್ಲೆಯ ಕಮಲಾನಗರ ಹಾಗೂ ಹುಲಸೂರು ಬಸ್ ನಿಲ್ದಾಣಗಳು ಸೂಕ್ತ ಉಪಯೋಗವಾಗುತ್ತಿಲ್ಲ.<br>ಕಮಲಾನಗರದಲ್ಲಿ ಮುಖ್ಯರಸ್ತೆ ಬದಿಯಲ್ಲಿ ತಂಗುದಾಣ ನಿರ್ಮಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲಾಗಿದೆ.<br>ಹುಲಸೂರಿನಲ್ಲಿ ಪೊಲೀಸ್ ಇಲಾಖೆಯ ನಿವೇಶನದೊಂದಿಗೆ ಈ.ಕ.ರ.ಸಾ.ಸಂಸ್ಥೆಯ ನಿವೇಶನ ಬದಲಾಯಿಸಿಕೊಳ್ಳುವ ಕುರಿತು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 121 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು